**ದಿಃ 12-10-2023 ರಂದು ಸಾಕ್ಷಿಯನ್ನು ಕರೆಸಿ ಪ್ರತಿಜ್ಞೆ ಮಾಡಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಪಿ ಎಸ್ ಎನ್ ವಕೀಲರಿಂದ ಪ್ರತಿವಾದಿ 2 (ಬಿ) ದಿಂದ (ಇ) ರ ಪರವಾಗಿಃ**

ನಾನು ಪಿ ಯು ಸಿ ವರೆಗೆ ಓದಿದ್ದೇನೆ. ಪ್ರತಿವಾದಿ ನಂ 1 ನನ್ನ ತಂದೆ. ನನಗೂ ನನ್ನ ತಂದೆಯ ಸಂಬಂಧ ಚನ್ನಾಗಿ ಇದೆ ಎಂದರೆ ಸರಿ. ಈ ದಾವೆಯನ್ನು ಬರೆಯಲು ನಾನೆ ಮಾಹಿತಿ ನೀಡಿದ್ದೇನೆ. ನಮ್ಮ ತಂದೆಯ ಕುಟುಂಬದ ಅಂದರೆ ಮನೆತನದ ಬಗ್ಗೆ ಸ್ವಲ್ಪ ಮಾಹಿತಿ ಇದೆ. ನಾನು ದಾಖಲಾತಿಗಳನ್ನು ನೋಡಿ ದಾವೆ ಬರೆಯಲು ವಕೀಲರಿಗೆ ಮಾಹಿತಿ ನೀಡಿದ್ದೇನೆ. ನಾನು ನಮ್ಮ ಕುಟುಂಬದ ಪೂರ್ವಜರ ವಾರಸಾ ವಿಷಯವಾಗಿ ದಾಖಲೆಗಳನ್ನು ನೋಡಿ ವಾದಪತ್ರದೊಂದಗಿರುವ ಇರುವ ವಂಶಾವಳಿ ತಯಾರಿಸಲು ಮಾಹಿತಿ ನೀಡಿದ್ದೇನೆ. ತಿಮ್ಮಾಜಿಯ ಹೆಂಡತಿಯ ಹೆಸರು ರಮಾಬಾಯಿ ಎಂದರೆ ಸರಿ. ದಾವಾ ವಂಶಾವಳಿಯಲ್ಲಿ ರಮಾಬಾಯಿಯನ್ನು ತೋರಿಸಿಲ್ಲ ಎಂದರೆ ಸರಿ. ದಾವಾ ಆಸ್ತಿಗಳಲ್ಲಿ ನಮ್ಮ ಪಾಲನ್ನು ನೀಡಲು ಕೇಳಿದ್ದೇನೆ. ನಮ್ಮ ಮುತ್ತಜ್ಜನ ಕಾಲದಿಂದ 1940 ಕ್ಕಿಂತ ಮೊದಲಿನಿಂದಲೂ ಪ್ರಕರಣಗಳು ನಡೆದ ಬಗ್ಗೆ ನನಗೆ ಮಾಹಿತಿ ಇಲ್ಲ. ದಾವಾ ಆಸ್ತಿಯ ಸರ್ವೆ ನಂ 89, ಕ್ಷೇತ್ರ 6 ಎಕರೆ 14 ಗುಂಟೆ ಇದೆ. 1943 ರಿಂದ ಇಲ್ಲಿಯವರೆಗೆ ಸದರಿ ದಾವಾ ಆಸ್ತಿಯಲ್ಲಿ ನಮ್ಮ ಪೂರ್ವಜರ ಮತ್ತು ನಮ್ಮ ತಂದೆ ಹಾಗೂ ಸಹೋದರರ ಹೆಸರು ಮಾಲ್ಕಿ ಕಬ್ಜಾ ವಹಿವಾಟಿ ನಾತೆಯಿಂದ ಇರುವ ಬಗ್ಗೆ ದಾಖಲೆ ಹಾಜರ ಪಡಿಸಿದ್ದೇನೆ. ಆ ಬಗ್ಗೆ ಜಮೀನಿನ ಪಹಣಿ ಹಾಜರ ಪಡಿಸಿದ್ದೇನೆ. ನಿಪಿ-4 ರಿಂದ 6 ರಲ್ಲಿ ಮದ್ವಾಚಾರ್ಯ ತಂದೆ ರಾಮಚಾರ್ಯ ಗುಡಿ ಇವರ ಹೆಸರು ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವು ಸುಳ್ಳು ದಾಖಲೆಗಳು ಇವೆ ಎಂದು ಹೇಳುತ್ತಾರೆ. ಆ ದಾಖಲೆಗಳನ್ನು ನಾನೆ ಹಾಜರ ಪಡಿಸಿದ್ದೇನೆ. ಸದರಿ ದಾಖಲೆಗಳನ್ನು ನಮ್ಮ ಪೂರ್ವಜರಾಗಲಿ, ನಾನಾಗಲಿ ಇಲ್ಲಿಯವರೆಗೆ ಪ್ರಶ್ನಿಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಆ ಬಗ್ಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಸದರಿ ಆಸ್ತಿ ಉತಾರೆಯಲ್ಲಿ ಮದ್ವಾಚಾರ್ಯರ ಹೆಸರು ಹೇಗೆ ಬಂತು ಎಂದು ವಿಚಾರಿಸಿದ್ದಿರಾ ಎಂಬ ಪ್ರಶ್ನೆಗೆ ನಾನು ದಾಖಲೆಗಳನ್ನು ಪಡೆದು ನಮ್ಮ ವಕೀಲರಿಗೆ ತೋರಿಸಿ ಆ ಬಗ್ಗೆ ವಿಚಾರಿಸಿದಾಗ 1939 ಕ್ಕಿಂತ ಮುಂಚೆ ಸದರಿ ಆಸ್ತಿಯ ದಾಖಲೆಯಲ್ಲಿ ನಮ್ಮ ತಾತಾ ಕೃಷ್ಣರಾವ್ ನಾರಾಯಣ ದೇಸಾಯಿ ಇವರ ಹೆಸರು ಇದ್ದದ್ದು ತಿಳಿದುಬಂದಿದೆ. ಶ್ರೀಮತಿ ರುಕ್ಮಣಿಬಾಯಿ ತಿಮ್ಮಾಜಿ ದೇಸಾಯಿ ಇವರು 1943 ಕ್ಕಿಂತ ಪೂರ್ವದಲ್ಲಿ ಮದ್ವಾಚಾರ್ಯ ಗುಡಿ ಇವರ ಪೂರ್ವಜರಿಗೆ ಸದರಿ ಆಸ್ತಿಯನ್ನು ಭಕ್ಷಿಸ ಮಾಡಿದ್ದರು ಎಂದರೆ ಸರಿಯಲ್ಲ. ರುಕ್ಮಣಿಬಾಯಿ ಇವರು ವಿಠೋಬಾ ಗುಡಿಯಲ್ಲಿ ದೀಪ ಹಚ್ಚುವ ಸಲುವಾಗಿ ಆ ಕಾರ್ಯನಿಮಿತ್ಯ ಮದ್ವಾಚಾರ್ಯರಿಗೆ ಜಮೀನನ್ನು

ಸಾಗುವಳಿ ಮಾಡಲು ನೀಡಿರುತ್ತಾರೆ. 1943 ರಿಂದ ಮದ್ವಾಚಾರ್ಯ ಜೀವಂತ ಇರುವವರೆಗೆ ಅವರ ಹೆಸರು ದಾವಾ ಆಸ್ತಿಯ ಪಹಣಿಯಲ್ಲಿ ಮಾಲೀಕ ವ ಕಬ್ಜಾದಾರ ಎಂದು ಮುಂದುವರೆದಿತ್ತು ಎಂದರೆ ಸರಿಯಲ್ಲ. ಮಾಲೀಕರು ಮತ್ತು ಕಬ್ಜಾದಾರ ಕಾಲಂದಲ್ಲಿ ನಮ್ಮ ತಾತ ಕೃಷ್ಣರಾವ್ ಇವರ ಹೆಸರು ಮುಂದುವರೆದಿತ್ತು ಎಂದು ಹೇಳುತ್ತಾರೆ. ನಿಪಿ-4 ರಲ್ಲಿ ನಮ್ಮ ತಾತ ಕೃಷ್ಣರಾವ ಇವರ ಹೆಸರು ಇದೆ. ಅದೇ ನಿಪಿ-4 ರಲ್ಲಿ ಸಾಗುವಳಿದಾರರ ಹೆಸರು ಮದ್ವಾಚಾರ್ಯ ಗುಡಿ ಇವರ ಹೆಸರು ದಾಖಲಾಗಿದೆ ಎಂದರೆ ಸರಿಯಲ್ಲ.

ಹನಮಂತರಾವ್ ಗುಡಿ ಮದ್ವಚಾರ್ಯ ಗುಡಿ ಇವರ ಮಗ ಎಂದರೆ ಸರಿ. ದಿನಾಂಕ 02.01.1943 ರಲ್ಲಿ ಮದ್ವಾಚಾರ್ಯ ಗುಡಿ ಇವರು ಸದರಿ ಆಸ್ತಿಯನ್ನು ಎಚ್ ಆರ್ ಗುಡಿಯವರಿಗೆ ನೊಂದಾಯಿತ ಹಕ್ಕುಬಿಟ್ಟು ಪತ್ರದ ಮೂಲಕ ಬಿಟ್ಟುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆ ದಾಖಲೆ ತಪ್ಪು ಇರುತ್ತದೆ ಎಂದು ಹೇಳುತ್ತಾರೆ. ಸದರಿ ದಾಖಲೆಯನ್ನು ನನ್ನ ಪೂರ್ವಜರಾಗಲಿ, ನಾನಾಗಲಿ ಪ್ರಶ್ನಿಸಿಲ್ಲ ಎಂದರೆ ಸರಿ. ಸದರಿ ದಾಖಲೆಯ ಪ್ರಕಾರ ದಾವಾ ಆಸ್ತಿಗೆ ಎಚ್. ಆರ್. ಗುಡಿ ಹೆಸರು ದಾಖಲಾಯಿತು ಎಂದರೆ ಸರಿಯಲ್ಲ. ಎಚ್ ಆರ್ ಗುಡಿಯವರು ಹೆಸರು ದಾವಾ ಆಸ್ತಿಯ ದಾಖಲೆಗಳಲ್ಲಿ ನಮೂದ ಆಗಿರುವುದನ್ನು ನೋಡಿದ್ದೇನೆ. ಎಚ್ ಆರ್ ಗುಡಿಯವರು ಜೀವಂತ ಇರುವವರೆಗೆ ಅವರು ಹೆಸರು ಖಾತಾ ನಂ 34 ರ ಪ್ರಕಾರ ದಾಖಲೆಯಲ್ಲಿ ಮುಂದುವರೆದಿದೆ ಎಂದರೆ ಸರಿಯಲ್ಲ. ಎಚ್ ಆರ್ ಗುಡಿಯವರು ದಿನಾಂಕ 19.02.2012 ರಂದು ತೀರಿಕೊಂಡರು ಎಂದರೆ ಸರಿ. ಅವರು ತೀರಿಕೊಂಡ ನಂತರ ಅವರ ವಾರಸುದಾರರರಾದ ಪ್ರತಿವಾದಿ 2(ಎ) ದಿಂದ (ಇ) ಇವರ ಹೆಸರು ವಾರಸಾನಾತೆಯಿಂದ ದಾಖಲಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರು ಮೋಸದಿಂದ ಹೆಸರು ಹಚ್ಚಿಕೊಂಡಿದ್ದಾರೆ ಎಂದು ಹೇಳುತ್ತಾರೆ. ಆದರೆ ಯಾರು ಯಾವಾಗ ಮೋಸ ಮಾಡಿ ಹೆಸರು ಹಚ್ಚಿಕೊಂಡಿದ್ದಾರೆ ಗೊತ್ತಿಲ್ಲ. ಪ್ರತಿವಾದಿಯರ ಹೆಸರಿನಲ್ಲಿರುವ ದಾಖಲೆಗಳನ್ನು ಈ ದಾವೆ ಹೊರತು ಪಡಿಸಿ ನಾನಾಗಲಿ, ನನ್ನ ಕುಟುಂಬದ ಬೇರೆ ಯಾರಾಗಲಿ ಪ್ರಶ್ನಿಸಿಲ್ಲ ಎಂದರೆ ಸರಿ.

04.09.1957 ರಲ್ಲಿ ನಮ್ಮ ಪೂರ್ವಜರು ಹಾಗೂ ಮದ್ವಾಚಾರ್ಯ ರ ಕುಟುಂಬದವರ ಮಧ್ಯ ಡಬ್ಲು ಟಿ ಎನ್ ಎಸ್ ಆರ್ 63 ದಿನಾಂಕ 10.10.1957 ಪ್ರಕರಣ ನಡೆದು ಅದು ನಮ್ಮ ಪೂರ್ವಜರ ವಿರುದ್ಧ ಆದೇಶ ಆಗಿದೆ ಎಂದರೆ ಗೊತ್ತಿಲ್ಲ. ಸದರಿ ಆದೇಶದ ಪ್ರಕಾರ ದಾವಾ ಆಸ್ತಿ ಎಚ್ ಆರ್ ಗುಡಿ ಅವರ ಪೂರ್ವಜರಿಗೆ ಸಂಬಂಧಿಸಿದ್ದು ಎಂದು ತೀರ್ಮಾನಿಸಲಾಗಿದೆ ಎಂದರೆ ಗೊತ್ತಿಲ್ಲ. ಆ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಪಕ್ಷಗಾರರಿಗೆ ನೋಟೀಸ ಮೂಲಕ ತಿಳಿಸಿದ್ದಾರೆ ಎಂದರೆ ಗೊತ್ತಿಲ್ಲ. ಸದರಿ ಆದೇಶವನ್ನು ನಮ್ಮ ಪೂರ್ವಜರಾಗಲಿ ನಾನಾಗಲಿ ಪ್ರಶ್ನಿಸಿಲ್ಲ. 1943 ರಿಂದ ಮೊದಲು ಮದ್ವಾಚಾರ್ಯರು ನಂತರ

ಎಚ್ ಆರ್ ಗುಡಿಯವರು, ಆ ನಂತರ ಅವರ ವಾರಸುದಾರರು ಮಾಲ್ಕಿನಾತೆಯಿಂದ ದಾವಾ ಆಸ್ತಿಯ ಕಬ್ಜಾವಹಿವಾಟಿಯಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಮೋಸದಿಂದ ಅಧಿಕಾರಿಗಳೊಂದಿಗೆ ಮಿಲಾಪಿಯಾಗಿ ತಮ್ಮ ಹೆಸರು ಹಚ್ಚಿಕೊಂಡಿದ್ದಾರೆ ಎಂದು ಹೇಳುತ್ತಾರೆ. ದಾವಾ ಆಸ್ತಿಗೆ ನಾವು ಮಾಲೀಕರು ಎಂದು ನನ್ನ ಪೂರ್ವಜರು ಘೋಷಣೆ ಕೋರಿ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿಲ್ಲ ಎಂದರೆ ಪಹಣಿಯಲ್ಲಿ ನಮ್ಮ ಪೂರ್ಜರ ಹೆಸರು ಇರುವುದರಿಂದ ದಾವೆ ಮಾಡುವ ಪ್ರಶ್ನೆಯೇ ಇಲ್ಲ ಎಂದು ಹೇಳುತ್ತಾರೆ. ದಾವಾ ಆಸ್ತಿಯಲ್ಲಿ ತಮಗೆ ಯಾವುದೆ ಹಕ್ಕು ಅಥವಾ ಮಾಲೀಕತ್ವ ಇಲ್ಲ ಎಂದು ಗೊತ್ತಿದ್ದ ಕಾರಣದಿಂದಾಗಿಯೇ ನನ್ನ ಪೂರ್ವಜರು ಮಾಲೀಕತ್ವದ ಮಾಗಣೆಯನ್ನು ಕೇಳಿಲ್ಲ ಎಂದರೆ ಸರಿಯಲ್ಲ.

ಎಚ್ ಆರ್ ಗುಡಿಯವರು ತೀರಿಕೊಂಡ ನತಂರ ಅವರ ವಾರಸುದಾರರು ದಾವಾ ಆಸ್ತಿಯಲ್ಲಿ ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಅವರು ತಮ್ಮಿಷ್ಟಕ್ಕೆ ತಾವೆ ಆ ರೀತಿ ವಿಭಾಗ ಮಾಡಿಕೊಂಡಿದ್ದಾರೆ ಎಂದು ಹೇಳುತ್ತಾರೆ. ಎಚ್ ಆರ್ ಗುಡಿಯವರ ಹೆಸರು ದಾಖಲಾದ ಬಗ್ಗೆ ಮತ್ತು ಅವರ ವಾರಸುದಾರರ ವಿಭಾಗ ಮಾಡಿಕೊಂಡ ಎಂಟ್ರಿಗಳನ್ನು ನಾವು ಪ್ರಶ್ನಿಸಿಲ್ಲ ಎಂದರೆ ಸರಿ. ದಾವಾ ಆಸ್ತಿಯ ಮೇಲೆ 1943 ರಿಂದ ಇಲ್ಲಿಯಮರೆಗೆ ಕಾಲಕಾಲಕ್ಕೆ ಎಚ್ ಆರ್ ಗುಡಿ ಹಾಗೂ ಅವರ ವಾರಸುದಾರರು ಬ್ಯಾಂಕ ಮತ್ತು ಸೊಸೈಟಿಗಳಿಂದ ಸಾಲ ಪಡೆದಿದ್ದಾರೆ ಎಂದರೆ ಗೊತ್ತಿಲ್ಲ.

ಈ ದಿನ ನಾನು ಮತ್ತ ನನ್ನ ತಂದೆ ಜೊತೆಯಾಗಿ ನ್ಯಾಯಾಲಯಕ್ಕೆ ಬಂದಿದ್ದೆವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಮ್ಮ ತಂದೆಯೊಂದಿಗೆ ನಾವು ಚನ್ನಾಗಿ ಇದ್ದರೂ ಸಹ ನಮ್ಮ ತಾತನಿಂದ ಬಂದ ಆಸ್ತಿಯಲ್ಲಿ ನಮ್ಮ ಹಕ್ಕು ಕೇಳುತ್ತಿದ್ದೇವೆ ಎಂದು ಹೇಳುತ್ತಾರೆ. ಪ್ರತಿವಾದಿ 2 ರ ವಾರಸುದಾರರು ಸಲ್ಲಿಸಿದ ತಕರಾರು ಮತ್ತು ದಾಖಲೆಗಳ ಬಗ್ಗೆ ತಿಳಿದುಕೊಂಡಿದ್ದೇನೆ. ಇದೇ ನ್ಯಾಯಾಲಯದಲ್ಲಿ ನನ್ನ ತಂದೆ ಓ ಎಸ್ ನಂ 123/16 ದಾವೆ ಹೂಡಿದ್ದರು ಎಂದರೆ ಇರಬಹುದು. ಸದರಿ ದಾವೆಯ ಬಗ್ಗೆ ನಾನು ನನ್ನ ತಂದೆಯನ್ನು ವಿಚಾರಿಸಿಲ್ಲ. ನನ್ನ ತಂದೆ ಹೊಲದ ಲಾವಣಿ ಹಣ ಕೊಡಿಸಬೇಕೆಂದು ಪರಿಹಾರ ಕೇಳಿ ಪ್ರತಿವಾದಿ 2 ರ ವಾರಸುದಾರರ ವಿರುದ್ಧ ಆ ದಾವೆಯನ್ನು ಹೂಡಿದ್ದರು ಎಂದರೆ ಆ ದಾವೆಯಲ್ಲಿ ನಾನು ಪಕ್ಷಗಾರಳಲ್ಲ ಎಂದು ಹೇಳುತ್ತಾರೆ. ಆ ದಾವೆಯಲ್ಲಿ ನನ್ನ ತಂದೆ ದಾವಾ ಆಸ್ತಿಯ ಮೇಲೆ ಮಾಲೀಕತ್ವದ ಬಗ್ಗೆ ಮಾಗಣೆ ಮಾಡಿರಲಿಲ್ಲ ಎಂದರೆ ಗೊತ್ತಿಲ್ಲ. 1943 ರಿಂದ ಇಲ್ಲಿಯವರೆಗೆ ನಮ್ಮ ಪೂರ್ವಜರಿಗೆ ದಾವಾ ಆಸ್ತಿಯ ಮೇಲೆ ಯಾವುದೆ ಮಾಲ್ಲಿ ಹಕ್ಕು ಇಲ್ಲದ್ದರಿಂದ ನಮ್ಮ ಪೂರ್ವಜರು ಆ ಬಗ್ಗೆ ಪರಿಹಾರಕ್ಕಾಗಿ ಯಾವುದೆ ದಾವೆ ಹೂಡಿಲ್ಲ ಎಂದರೆ ಸರಿಯಲ್ಲ.

ನಮ್ಮ ತಾತ ಕೃಷ್ಣರಾವ್ ನಾರಾಯಣ ದೇಸಾಯಿರವರಿಗೆ ನಿರ್ದಿಷ್ಟವಾಗಿ ಎಷ್ಟು ಅಸ್ತಿ ಪಾಲಿಗೆ ಬಂದಿತ್ತು ಗೊತ್ತಿಲ್ಲ. ನಮ್ಮ ಪೂರ್ವಜರು 60 ಹಳ್ಳಿಯ ದೇಸಾಯಿ ಆಗಿದ್ದು, ಸಾಕಷ್ಟು ಜಮೀನು ಇತ್ತು ಎಂದು ಹೇಳುತ್ತಾರೆ. ಆ ಎಲ್ಲಾ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಆ ಪೈಕಿ ಸಾಕಷ್ಟು ಜಮೀನುಗಳು ಟೆನನ್ಸಿಯಲ್ಲಿ ಹೋಗಿವೆ ದಾವಾ ಜಮೀನು ಹೊರತು ಪಡಿಸಿ ನಮ್ಮ ಕುಟುಂಬಕ್ಕೆ ಇನ್ನು ಬಹಳ ಜಮೀನುಗಳು ಇವೆ ಎಂದು ಹೇಳುತ್ತಾರೆ. ಮಾಚಾಪುರ ಗ್ರಾಮದ ಸರ್ವೆ ನಂ 97, 95, 89 ಹಾಗೂ 10 ರಲ್ಲಿ ನಮ್ಮ ಜಮೀನುಗಳು ಇವೆ. ಸರ್ವೆ ನಂ 97, 95 ಮತ್ತು 10 ಜಮೀನುಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ. ನನ್ನ ತಾತನ ಹೆಸರಿನಲ್ಲಿರುವ ಆಸ್ತಿಗಳನ್ನು ಬಿಟ್ಟು ದುರುದ್ದೇಶದಿಂದ ಪ್ರತಿವಾದಿ 2 ರವರಿಗೆ ಸೇರಿದ ಆಸ್ತಿಯಲ್ಲಿ ಯಾವುದೆ ಹಕ್ಕು ಇಲ್ಲದಿದ್ದರೂ ಸಹ ಅವರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ಅದೇ ಉದ್ದೇಶಕ್ಕಾಗಿ ಈ ದಾವೆಯಲ್ಲಿ ನಮ್ಮ ಮಾಲೀಕತ್ವದ ಘೋಷಣಗೆ ಪರಿಹಾರ ಕೇಳದೆ ಪ್ರತಿವಾದಿ 2 ರ ವಾರಸುದಾರರು ಮಾಲೀಕರು ಅಲ್ಲ ಎಂದು ವಿರುದ್ಧ ಘೋಷಣಾ ಪರಿಹಾರ ಕೇಳಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಾವು ಯಾವ ಕಾಲಕ್ಕೂ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸ್ವಾಧೀನ ನಮ್ಮದೆ ಇದ್ದು ಕೇವಲ ದೇವರಿಗೆ ದೀಪ ಹಚ್ಚುವು ಸಲುವಾಗಿ ಮದ್ವಾಚಾರ್ಯರಿಗೆ ನಮ್ಮ ಪೂರ್ವಜರು ಕೊಟ್ಟಿದ್ದರು ಎಂದು ಹೇಳುತ್ತಾರೆ. ನಾವು ದಾವಾ ಆಸ್ತಿಯ ಸ್ವಾಧೀನದಲ್ಲಿ ಇದ್ದೇವೆ ಎಂದು ತೋರಿಸಲು ದಾಖಲೆ ಹಾಜರ ಪಡಿಸಿಲ್ಲ. ದಾವಾ ಆಸ್ತಿಯ ಬಗ್ಗೆ ಸರಕಾರಕ್ಕೆ ಯಾರು ತೆರಿಗೆ ತುಂಬಿದ್ದಾರೆ ಗೊತ್ತಿಲ್ಲ. ಸಧ್ಯಕ್ಕೆ ದಾವಾ ಆಸ್ತಿಯಲ್ಲಿ 2 ನೇ ಪ್ರತಿವಾದಿಯ ವಾರಸುದಾರರು ಯಾವ ಬೆಳೆ ಬೆಳೆದಿದ್ದಾರೆ ಗೊತ್ತಿಲ್ಲ. ನಮ್ಮ ಕುಟುಂಬದ ವಂಶಾವಳಿಯ ಬಗ್ಗೆ ಮತ್ತು ದಾವಾ ಆಸ್ತಿಗಳ ಬಗ್ಗೆ ನನಗೆ ಯಾವುದೆ ಸರಿಯಾದ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ರುಕ್ಮಿಣಿಬಾಯಿ ತಿಮ್ಮಾಜಿ ದೇಸಾಯಿ ದಾವಾ ಆಸ್ತಿಯನ್ನು ಮದ್ವಾಚಾರ್ಯರಿಗೆ ಭಕ್ಷಿಸ ಮಾಡಿದ ವಿಷಯ ಗೊತ್ತಿದ್ದರೂ ಸಹ ಉದ್ದೇಶಪೂರ್ಕವಾಗಿ ಆ ಸಂಗತಿಯನ್ನು ಬಚ್ಚಿಟ್ಟು ದಾವೆ ಮಾಡಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಕುಟುಂಬ ಹಾಗೂ ಮದ್ವಾಚಾರ್ಯರ ಕುಟುಂಬದ ಮಧ್ಯ ನಡೆದ ಎಲ್ಲಾ ವ್ಯವಹಾರಗಳ ಬಗ್ಗೆ ನಮ್ಮ ತಂದೆಯಿಂದ ನಾನು ಕೇಳಿ ತಿಳಿದುಕೊಂಡಿದ್ದರೂ ಸಹ ಆ ಬಗ್ಗೆ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಂದೆ ದಾವೆ ಹೂಡಿದರೆ ಸತ್ಯಾಂಶ ಹೊರಬರುತ್ತದೆ ಎಂಬ ಉದ್ದೇಶದಿಂದ ನಮ್ಮ ಮೂಲಕ ಈ ದಾವೆ ಮಾಡಿಸಿದ್ದಾರೆ ಎಂದರೆ ಸರಿಯಲ್ಲ. ಖಾತಾ ನಂ 34 ಮತ್ತು ಎಂ ಇ ನಂ 675 ಪ್ರಕಾರ ಪಹಣಿ ಹಾಗೂ ಖಾತೆಗಳಲ್ಲಿ ಬದಲಾವಣೆ ಆದ ವಿಷಯ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ

ಎಂದರೆ ಸರಿಯಲ್ಲ. ಮೈಸೂರು ಸರಕಾರದವರು 1957 ರಲ್ಲಿ ಮಾಡಿದ ಆದೇಶದ ಬಗ್ಗೆ ಸಹ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ಸದರಿ ಆದೇಶ ಕಂದಾಯ ಅಧಿಕಾರಿಗಳ ಮೂಲಕ ಜಾರಿಯಾಗಿದೆ ಎಂದರೆ ಸರಿಯಲ್ಲ. ನಮ್ಮ ಪೂರ್ವಜರು ದಾವಾ ಆಸ್ತಿ ವಿಚಾರವಾಗಿ ಈ ಹಿಂದೆ ಸಾಕಷ್ಟು ಪ್ರಕರಣ ದಾಖಲಿಸಿ ವಿಫಲರಾಗಿದ್ದರಿಂದ ಈಗ ನಮ್ಮ ಮೂಲಕ ಹೊಸ ವಾದಕಾರಣ ತೋರಿಸಿ ಸುಳ್ಳು ದಾವೆ ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ. 1943 ಕ್ಕಿಂತ ಮುಂಚೆಯೇ ನಮ್ಮ ಪೂರ್ವಜರಿಗೆ ದಾವಾ ಆಸ್ತಿಯಲ್ಲಿನ ಹಕ್ಕು ನಷ್ಟವಾಗಿದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಮಗೆ ಯಾವುದೆ ಹಕ್ಕಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 2 ರ ವಾರಸುದಾರರನ್ನು ಬ್ಲ್ಯಾಕ ಮೇಲ ಮಾಡಿ ಅವರ ಆಸ್ತಿ ಎತ್ತಿಹಾಕುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಕಲಘಟಗಿ.